ಸೋಮವಾರಪೇಟೆ ತಾಲ್ಲೂಕಿನಲ್ಲಿ ರೇಷ್ಮೆಇಲಾಖೆ ವತಿಯಿಂದ ಹರಿಜನಗಿರಿಜನರಿಗೆ ಸೌಲಭ್ಯ.

5 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖಾ ವತಿಯಿಂದ ಎಷ್ಟು ಜನ ಹರಿಜನ ಗಿರಿಜನರಿಗೆ ಸರ್ಕಾರದಿಂದ ಸಾಲ ಕಲ್ಪಿಸಲಾಗಿದೆ.

ಆ) ಸ್ಕೀಂಗಳ ವಿವರಗಳೇನು?

ಇ) ಒಟ್ಟು ಮಂಜೂರಾದ ಹಣವೆಷ್ಟು?

ಡಾ॥ ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಸರ್ಕಾರದಿಂದ ಸಾಲ ನೀಡುವ ಯೋಜನೆ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಇಲ್ಲ. ಆದರೆ ಬ್ಯಾಂಕುಗಳಿಂದ ಸಾಲ ಪಡೆದುಕೊಂಡಿರುವ ಹರಿಜನ ಮತ್ತು ಗಿರಿಜನರಿಗೆ ಈ ಕೆಳಗಿನಂತೆ ಇಲಾಖಾ ಮತಿಯಿಂದ ಸಹಾಯ ಧನ ನೀಡಲಾಗಿದೆ.

ಅ) ಪರಿಶಿಷ್ಟ ಜಾತಿ ಫಲಾನುಭವಿಗಳಿಗಾಗಿ

1. ರೇಷ್ಮೆಹುಳು ಸಾಕುವ ಮನೆ
2. ಹುಳುಸಾಕಣೆ ಉಪಕರಣಗಳು
3. ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ
4. ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್

ಪರಿಶಿಷ್ಟ ವರ್ಗ ಫಲಾನುಭವಿಗಳಿಗಾಗಿ

1. ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ ಧನ
2. ರೇಷ್ಮೆ ಹುಳುಸಾಕಣೆ ಸಲಕರಣೆಗಳ ಸರಬರಾಜು

ಇ) ಒಟ್ಟು ಸಹಾಯ ಧನ ರೂ. 1,68,000-00

ಬೇಲೂರು ತಾಲ್ಲೂಕಿನಲ್ಲಿ ಪ್ರವಾಹ ಪರಿಹಾರ

15 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ 1993-94 ಹಾಗೂ 1994-95ರಲ್ಲಿ ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಕೆರೆಗಳು, ರಸ್ತೆಗಳು (ಜಿಲ್ಲಾ ಪರಿಷತ್ ಮತ್ತು ಲೋಕೋಪಯೋಗಿ) ಮತ್ತು ಖಾಸಗಿ ಕಟ್ಟಡಗಳು, ಬೆಳೆಗಳ ಒಡ್ಡುಗಳು ಹಾಗೂ ಪಂಪುಸೆಟ್ಟುಗಳು ಎಷ್ಟು? ವಿವರ ಒದಗಿಸುವುದು.

ಆ) 1993-94 ಮತ್ತು 1994-95ರಲ್ಲಿ ಪರಿಹಾರ ಕಾರ್ಯಗಳಿಗಾಗಿ ಮಂಜೂರಾದ ಹಣವೆಷ್ಟು?

ಇ) 1993-94 ರಲ್ಲಿ ಹಾನಿಗೊಳಗಾದ ಕೆಲವು ಕಾಮಗಾರಿಗಳನ್ನು • ಜಿಲ್ಲಾ ಸಚಿವರು ಖುದ್ದಾಗಿ ಪರಿಶೀಲಿಸಿ, ಸದರಿ ಕಾಮಗಾರಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ತಿಳಿಸಿದ್ದರು. ಇನ್ನೂ ಕೈಗೊಳ್ಳದಿರಲು ಕಾರಣವೇನು?

• ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) 1) 1993-94ನೇ ಸಾಲಿನಲ್ಲಿ ಹಾಸನಜಿಲ್ಲೆಗೆ ರೂ.94.00ಲಕ್ಷಗಳನ್ನು ಬಿಡುಗಡೆಮಾಡಿದ್ದು, ಇದರಲ್ಲಿ ಬೇಲೂರು ತಾಲ್ಲೂಕಿಗೆ ರೂ.23,72,043.00 ಗಳನ್ನು ಬಿಡುಗಡೆ ಮಾಡಿದೆ.

2) 1994-95ನೇ ಸಾಲಿನಲ್ಲಿ ಹಾಸನಜಿಲ್ಲೆಗೆ ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ರೂ.15.00 ಲಕ್ಷಗಳನ್ನು ಬೇಲೂರು ತಾಲ್ಲೂಕು ಖಾಸಗಿ ಆಸ್ತಿಪಾಸ್ತಿಗಳ ಪರಿಹಾರ ನೀಡಲು ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿ ಕೈಗೊಳ್ಳಲು ಬಿಡುಗಡೆ ಮಾಡಿದೆ.

ಇ) 1993-94ನೇಸಾಲಿನಲ್ಲಿ ಬೇಲೂರು ತಾಲ್ಲೂಸ್ನಲ್ಲಿ ಬಾರಿ ಮಳೆಯಿಂದ ಹಾನಿಗೊಂಡ ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗಾಗಿ ರೂ.21.30 ಲಕ್ಷಗಳು ಖರ್ಚು ಮಾಡಿದೆ. ಪ್ರಕೃತಿವಿಕೋಪ ಪರಿಹಾರನಿಧಿಯಲ್ಲಿ ಲಭ್ಯವಿರುವ ಹಣದ ಆಧಾರದ ಮೇಲೆ ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.